Rega No BG 155

Sri "SATYAVADI"
— DAILY —
MYSORE4
46 th Year

Protect the cow

— శ్రీ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಂತಯ್ಯರು [ಬಿಡಿ ಪ್ರತಿ 3 ಪೈ

4—4—1962

ಪ ವ. ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಕೇರಳ ಮಂತ್ರಿಮಂಡಲ ವಿರುದ್ಧ ಸಹಿಸಂಗ್ರಹ

ಕೇರಳ ಪ್ರದೇಶ ಕಾಂಗ್ರೆಸು ಅಧ್ಯಕ್ಷರನ್ನು ತೆಗೆಯಲು ಹಾಗೂ 2 ವರ್ಷದ ಕಾಂಗ್ರೆಸು-ಪಿಎಸ್ಪಿ ಮಂತ್ರಿಮಂಡಲ ತೆಗೆಯಲು ಕೇರಳ ಕಾಂಗ್ರೆಸಿಗರು ಸಹಿ ಸಂಗ್ರಹ ಅಂಭಿಸಿರುವದಾಗಿ ತಿರುವೇಂದ್ರದಿಂದ ವಾರ್ತೆ ಬಂದಿದೆ

ಹೋರಾಡುವಂತೆ ನೆಹರು ಕರೆ

ನವದೆಹಲಿಯಿಂದ ಬಂದಿರುವ ವರದಿಯು ಪ್ರಕಾರ, ನಿನ್ನೆ ಪಾರ್ಲಿಮೆಂಟರಿ ಕಾಂಗ್ರೆಸು ಪಕ್ಷಕ್ಕೆ ಪಂ|| ನೆಹರು ಸಂದೇಶ ಕಳಿಸಿ, ದೆಳೆಯುತ್ತಿರುವ ಜಾತಿ ಪ್ರಭಾವ ಮತ್ತು ಗುಂಪು ಭಾವನೆಯ ವಿರುದ್ಧ ಸರಣಾಮಕಾರಿಯಾಗಿ ಹೋರಾಡದಿದ್ದರೆ ಪ್ರಜಾಪ್ರಭುತ್ವ ದುರ್ಬಲವಾಗುವುದು ಎಂದೂ ಪಕ್ಷದ ನಾಯಕರಾಗಿ ಅವರು ನಿರ್ವಹಿಸುವುತದಿಂದ ಜುನಾಯಿತರಾದರು.

ಬಾಲಕನಿಂದ ತಂದೆ, ತಾಯಿ ಕೊಲೆ

14 ವರ್ಷದ ಬಾಲಕ ತನ್ನ ತಂದೆ, ತಾಯಿಯರು ನಿದ್ರಿಸುತ್ತಿದ್ದಾಗ ಪಿಸ್ತೂಲಿನಿಂದ ಸೋದರವಾಂ ಹೊಡೆದುಕೊಂದ ವಾರ್ತೆ ಫಿಲಿಡೆಲ್ಫಿಯಾದಿಂದ ಬಂದಿದೆ ಇಂಗ್ಲೀಷು ಪರೀಕ್ಷೆಯಲ್ಲಿ ಅನುತ್ತೀರ್ಣನಾದನೆಂದು ಕಳೆದವಾರ ತಂದೆತಾಯಿಯರು ಹುಡುಗನನ್ನು ದಂಡಿಸಿದ್ದರು ಕೊಂದಸಂತಂ ಹುಡುಗನು ಪಾವ್ರಿಯ ಬಳಿ ತಪ್ಪೊಪ್ಪಿಕೊಂಡನು ತಕ್ಷಣ ಪತ್ತೆದಾರಿಂಗೆ ಈ ವಿಷಯ ತಿಳಿಸಲು ಅವರು ಮನೆಗೆ ಹೋಗಿನೋಡಲು ಸ್ವೀಫ್ಟ್ ಹಾಗೂ ಎಲಿಜೆಬೆತ್ ಜಾನಿಯವರ್ ಹಣೆ ಹಾಗೂ ಹಿಂಭಾಗದಲ್ಲಿ ಏಟುಬಿದ್ದು ಸತ್ತಿದ್ದರು

× ಪರಮಕುಡಿ ಬಳಿ ಮೊನ್ನೆ ರಾತ್ರಿ ಜರ್ಮನ್ ಪ್ರವಾಸಿಕನನ್ನು ದರೋಡೆಗಾರರು ಚೂರಿಯಿಂದ ಇರಿದರು

× ಪಂ|| ನೆಹರು ಆರೋಗ್ಯವಾಗಿದ್ದಾರೆ. ಅಧ್ಯಕ್ಷ ಪ್ರಸಾದರು ನಿನ್ನೆ ಅವರ ಭೇಟಿ ಮಾಡಿದರು.

ಜೇಲು ವಾಸ

ಬೊಂಬಾಯಿನ ನಾವೆಯ ನೌಕರರಾದ ದಿತ್ತಬೂದಿಯ ಹಾಗೂ ಪುರುಷೋತ್ತಮ ಭಗವಾರಿಗೆ 103 ಪೌಂಡು ಅಪೀವನ್ನು ಅಕ್ರಮವಾಗಿ ಸಾಗಿಸಿದ ಆರೋಪದ ಮೇಲೆ ಲಂಡನ್ನಲ್ಲಿ ಈರ್ವರಿಗೂ ತಲಾ 6 ತಿಂಗಳು ಜೇಲು ವಾಸ ಶಿಕ್ಷೆ ವಿಧಿಸಲಾಯಿತು.

ರಹದಾರಿ ಇಲ್ಲದೆ ಪ್ರವಾಸ

ರಹದಾರಿ ಇಲ್ಲದೆ ಭಾರತದ ಹೊರಗೆ ಹೋಗಲು ಹುಡುಗನೋರ್ವ ಪ್ರಯತ್ನ ಪಡಾಡಿದ್ದು ವಿಫಲವಾಯಿತೆಂದು ಬೊಂಬಾಯಿ ವಾರ್ತೆ. ಬಾಲಾರ್ಡ್ ಪಿಯರಿನಲ್ಲಿ ಮಾರ್ಚಿ 15 ರಂದು ಬಾಲಕನು ಅಕ್ರಮವಾಗಿ ಹಡಗು ಹತ್ತಿದನೆಂದು ಹೇಳಲಾಗಿದೆ ಸಮುದ್ರ ಮಧ್ಯದಲ್ಲಿ ಅವನನ್ನು ಹಡಗಿನ ಯಜಮಾನ ಪತ್ತೆಮಾಡಿದನು ವತ್ತೊಂದು ಹಡಗಿನಿಂದ ಅವನನ್ನು ವಾಪಸು ಕಳಿಸಿದನಂತರ ವಿಶೇಷ ಸಿಐಡಿಗಳು ಅವನನ್ನು ವಶಕ್ಕೆ ತೆಗೆದುಕೊಂಡರು ನಿನ್ನೆ ಅವನನ್ನು ಬೊಂಬಾಯಿನ ಪ್ರೆಸಿಡೆನ್ಸಿಮ್ಯಾಜಿಸ್ಟ್ರೇಟರ ಕೋರ್ಟಿನ ಮುಂದೆ ಹಾಜರುಮಾಡಲಾಗಿ ಅವನನ್ನು ಜಾಮೀನು ಮೇಲೆ ಬಿಡುವ ಆಜ್ಞೆ ಆಯಿತು.

ಭಾರತದ ಆಭರಣ ಕೊಂಡ

ಭಾರತದಲ್ಲಿ 2 ವಾರಂಗಳ ಪ್ರವಾಸ ಮಾಡಿ 5 ಲಕ್ಷ ಡಾಲರುಗಳ ಆಭರಣಗಳನ್ನು ಕೊಂಡ ಅಂತರ್ರಾಷ್ಟ್ರೀಯ ಪ್ರಸಿದ್ಧ ರತ್ನ ವ್ಯಾಪಾರಿ ಕ್ಲೌಡಿಯಾ ಅರ್ಪೆಲ್ಸ ಮೊನ್ನೆ ನ್ಯೂಯಾರ್ಕಿಗೆ ವಾಪಸಾದರು

ವಿವಾಹ ವಿಚ್ಛೇದನ

ಸಿನಿಮಾ ನಟ ಎಲಿಜೆಬೆತ್ ಟೇಲರ್ ಹಾಗೂ ನಟ ಎಡ್ಡಿ ಫಿಷರ್ ವಿವಾಹ ವಿಚ್ಛೇದನ ಮಾಡಿಕೊಳ್ಳಲು ನಿರ್ಧರಿಸಿರುವದಾಗಿ ನ್ಯೂಯಾರ್ಕಿನ ವಾರ್ತೆ

ವಿಸ್ಕಿ ಪತ್ತೆ

672 ಬಾಟಲುಗಳಷ್ಟು ಸ್ಕಾಚ್ ವಿಸ್ಕಿಯನ್ನು ಸೋಮವಾರ ವಶಮಾಡಿಕೊಂಡುದಾಗಿ ಬೊಂಬಾಯಿ ಪೋಲೀಸರು ತಿಳಿಸಿರುವರು. ಇದು ಇತ್ತೀಚಿಗೆ ಆದ ವಿದೇಶಿ ಮದ್ದದ ಮೇಲಿನ ಭಾರಿ ದಾಳಿ ರೂ 30 ಸಾವಿರ ಬೆಲೆ ಬಾಳುವ ಈ ಸಾಮಗ್ರಿಗಳು ಗೋವಾದಿಂದ ಅಕ್ರಮವಾಗಿ ಬಂದಿರುವದೆಂದು ನಂಬಲಾಗಿದೆ ಈ ಸಂದರ್ಭದಲ್ಲಿ 8 ಜನರನ್ನು ಪೋಲೀಸರು ವಶಕ್ಕೆ ತೆಗೆದುಕೊಂಡಿರುವರು

ಯುಗಾದಿ ಶುಭಾಶಯ

ಭಗವಂತನು ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲಿ

ಭಾಷಣದ ಪ್ರತಿ ತುಳಿತ

ರಾಜ್ಯಪಾಲರ ಭಾಷಣದ ಪ್ರತಿಯನ್ನು ಕಳಿಗೆ ಎಸೆದು ತುಳಿದು ಅನಂತರ ಏಕ್ಕೆಕ ಸೋಷಲಿಸ್ಟು ಸದಸ್ಯ ಶ್ರೀ ಬಿ ಗೋಪಾಲಗೌಡರು ನಿನ್ನೆ ವಿಧಾನ ಸಭೆಯಿಂದ ಸಭಾತ್ಯಾಗ ಮಾಡಿದರು ಈ ರೀತಿ ಮಾಡಬಾರದು, ಹಾಗೆ ಮಾಡುವದು ರಾಜ್ಯಪಾಲರಿಗೆ ಅವಮಾನ ಮಾಡಿದಂತೆ ಎಂದರು. ಶ್ರೀ ಗಾಂಜಿ ವೀರಪ್ಪನವರು ಮಾತನಾಡಿ ಇದು ವಿಷಾದದ ವಿಚಾರ, ಇದರಲ್ಲಿ ಸಭೆಯ ಹಕ್ಕುಬಾಧ್ಯತೆ ಸಂಬಂಧಿಸಿದೆ ಎಂದರು. ಈ ರೀತಿ ಯೋಚಿಸಿದವರಾದರೆ ಹಕ್ಕುಬಾಧ್ಯತೆ ಅಂಶವನ್ನು ಒರೆದು ಕಳಿಸುವಂತೆ ಸ್ವೀಕರರು ನುಡಿದರು.

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

5 ಪ್ರಥಮ ಚೈತ

ಯುಗಾದಿ ವಿಶೇಷಾಂಕ ನಾಳೆ ಸತ್ಯವಾದಿ ಪತ್ರಿಕೆಗೆ ರಜ

ವಿವಿಧ ವಿಷಯಗಳು

ಮಾರ್ಚಿ 21 ರಂದು, ಹೊಸದಾಗಿ ಜನಿಸಿದ ಮಗುವನ್ನು ಅಪರಿಚಿತ ಮಹಿಳೆಯರ್ಭಾಂಗ ವೆಟ್ಟಿಟಿ ವಾರ್ಡಿನಿಂದ ಎತ್ತಿಕೊಂಡ ಹೋಗಿದ್ದು ಇನ್ನೂ ಸಿಕ್ಕಿಲ್ಲವೆಂದು ಬಹಾಂ ವಿಧಾನ ಸಭೆಯಲ್ಲಿ ನಿನ್ನೆ ತಿಳಿಸಲಾಯಿತೆಂದು ಪಾಟ್ನಾ ವಾರ್ತೆ ಹಾಲು ಕುಡಿಸುವದಾಗಿ ಅಪರಿಚಿತ ತಿಳಿಸಲು ಸಂಶಯವಿಲ್ಲದೆ ನರ್ಸ್ ಅಪಹರಣ ಮಾಡಿರಬಹುದೆಂದು ಅಭಿಪ್ರಾಯ ಪಡಲಾಗಿದೆ.

ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ನಿನ್ನೆ ಬೆಂಗಳೂರಿನಲ್ಲಿ ವಿಧಾನ ಸಭೆಯಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಆದ ಚರ್ಚೆಗೆ ಉತ್ತರವೀಯುತ್ತಾ, ವೈಸೂರು ವಿಧಾನಸಭೆಯನ್ನು ಶಾಶ್ವತೀಕರಿಸಿ ಅಗಿ ಮಾಡುವದು ವಿಚಾರವನ್ನು ಪರಿಶೀಲಿಸುವದಾಗಿ ನುಡಿದರು. ವೃದ್ಧರಿಗೆ ವಿಧವೆಯರಿಗೆ ವೇತನ ಕೊಡುವ ಯೋಜನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ ಎಂದು ಅವರು ನುಡಿದರು

ಪಠ್ಯ ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವದು ಮುಟ್ಟವನ್ನು ಹೆಚ್ಚಿಸುವದು ಸರ್ಕಾರದ ಗಮನವನ್ನು ಸೆಳೆದಿದೆ ಎಂದು ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ನಿನ್ನೆ ವಿಧಾನಸಭೆಯಲ್ಲಿ ತಿಳಿಸಿದರು

ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂಠಿಯವರು ಬೆಂಗಳೂರಿನಲ್ಲಿ ನಿನ್ನೆ ವಿಧಾನ ಸಭೆಯಲ್ಲಿ ಹೇಳಿಕೆಯೊಂದರಲ್ಲಿ, ಮೈಸೂರು-ಮಹಾರಾಷ್ಟ್ರ ಗಡಿಗಳ ವಿಷಯದ ಬಗ್ಗೆ ಹಿರಿಯ ಬದಲಾವಣೆಗಳು ಕೂಡದು, ಕಿರಿಯ ಬದಲಾವಣೆಗಳಿಗೆ ಸಾಧ್ಯತೆ ಇದೆ ಎಂದರು.

ಈ ವಾರದ ಆಡಳಿತದಲ್ಲಿ ಪಂ|| ನೆಹರು ತನ್ನ ಮಂತ್ರಿಮಂಡಲದ ರಚನೆ ಪೂರ್ಣ ನಿರೀಕ್ಷೆ ಇದೆ ಎಂದು ದೆಹಲಿ ವಾರ್ತೆ. ಶ್ರೀ ಟಿ ಟಿ ಕೃಷ್ಣಮಾಚಾರಿಯವರನ್ನು ಮಂತ್ರಿ ಆಗುವಂತೆ ನೆಹರು ಆಹ್ವಾನಿಸಿರುವರೆಂದು ವಾರ್ತೆ.

ಹಣ

ಹಣದಿಂದ ಏನನ್ನೂ ಕೊಂಡುಕೊಳ್ಳಬಹುದು- ಎಂದೀ ಮಾತು ಪುಶಿಕ್ಕಿನ ತರಂತೆ ಅಶಿಕ್ಷಿತರಿಗೂ ಗೊತ್ತು ; ಹಣ ಕೊಟ್ಟು ರಾಜ್ಯ ಉಳಿಸಿದವರಿದ್ದಾರೆ. ರಾಜ್ಯ ಕೊಂಡುಕೊಂಡವರಿದ್ದಾರೆ, ಕೊಲೆಮಾಡಿಸಿದವರಿದ್ದಾರೆ, ಜೀವದಾನ ಮಾಡಿದವರಿದ್ದಾರೆ, ಪಾತಿವ್ರತ್ಯ ಕೆಡಿಸಿದವರಿದ್ದಾರೆ, ಸತೀತ್ವ ಉಳಿಸಿದವರಿದ್ದಾರೆ, ಸುಖವನ್ನು ಖರೀದಿಸಿದವರಿದ್ದಾರೆ, ಸಂತೋಷವನ್ನು ಕೆಡಿಸಿಡವರಿದ್ದಾರೆ.... .... ಹೀಗೆ ಹಣದಿಂದ ಯಾವುದನ್ನೂ ಖರೀದಿಸಬಹುದು.

೦೦೦೦

ಹಣದ ವಿಷಯವಾಗಿ ಭರ್ತೃಹರಿ ಹೀಗೆಂದಿದ್ದನು : ' ಹಿಮಾಸ್ಯಸ್ತ ಏತ್ಯಂ ಪನರಃ ಕುಲೀನ ಪಸಂಡಿತಃ ಸುಶ್ರುತವಾ೯ ಗುಣಜ್ಞಃ | ಸ ಏವ ವಕ್ತಾ ಚ ಸದರ್ಶನೀಯಃ ಸರ್ವೇ ಗುಣಾಃ ಕಾಂಚನಮಾಶ್ರಯಂತಿ || (ತಾತ್ಪರ್ಯ- ಯಾವನು ಧನವಂತನೋ ಅತನೇ ಸತ್ಕುಲಪ್ರಸೂತನೂ, ವಿದ್ವಾಂಸನೂ, ಧರ್ಮಶ್ರವಣ ಕುಶಲನೂ, ವಾಕ್ಪಟುವೂ, ಗುಣಗ್ರಾಹಿಯೂ, ದಿವ್ಯಸುಂದರನೂ ಆಗಿರುತ್ತಾನೆ ; ಲೋಕದಲ್ಲಿ ಎಲ್ಲ ಗುಣಗಳೂ ಧನವನ್ನು ಆಶ್ರಯಿಸುತ್ತವೆ.)

೦೦೦೦

ಪುಂದರದಾಸರೂ ಹಾಡಿದ್ದಾರೆ— ' ಹಣವೇ ನಿನಗು ಗುಣ .... ' ಎಂದು ; ' ಸಬ ಪೈಸೇಕಾ ಭಾಯಿಯಾ .... ' ಎಂದು ಕಬೀರನೂ ಹಾಡಿದ್ದಾನೆ.

೦೦೦೦

ಧನದಿಂದ ಕೊಂಡುಕೊಳ್ಳಬಹುದಾದ ಇನ್ನೊಂದು ವಸ್ತು— ಪ್ರಸಿದ್ಧಿ : ಈ ಪ್ರಸಿದ್ಧಿಯನ್ನು ಖರೀದಿಸುತ್ತ, ಅದರ ಅಮಲಿನಲ್ಲಿ ಹೆಚ್ಚೆಚ್ಚು ಖರೀದಿಸುತ್ತಲೇ ಇರುವವನೂ ನೋಡಿಸಿಕ್ಕುವುದು ಅಪರೂಪದಲ್ಲ ; ' ಇದು ಒಲಿದುಬಂದ ಪ್ರಸಿದ್ಧಿಯಲ್ಲ, ಕಳೆದ ಎಳೆದು ತಂದ ಪ್ರಸಿದ್ಧಿ ' ಎಂದು ಅಂಥವರಿಗೆ ತಿಳಿಸಿದರೆ ಕೂಡ ನಿರ್ಲಜ್ಜರಾಗಿ ಅದನ್ನೇ ಇಚ್ಛಿಸುತ್ತಾರೆ : ಈ ಪ್ರಸಿದ್ಧಿಯು ಹಸುವು ಮೃಗಗಳಿಗಿರುವ ಆಹಾರದ ಹಸಿವಿನಂತೆ ! ಮೃಗಗಳು ಮೈಮೇಲೆ ಹಾರಿ ಹಸಿವನ್ನು ತಣಿಸಿಕೊಳ್ಳುವಂತೇ ಈ ಕೃತ್ರಿಮ ಜನಪ್ರಿಯತಾಕಾರದಿಂದ ಅದನ್ನು ಹೊಂದುತ್ತಾಳೆ; ಖರೀದಿಸುವ ಪ್ರಸಿದ್ಧಿಯ ಹಸಿವುಳ್ಳವನು, ತಾನಿಷ್ಟ ಹಣಕ್ಕೆ, ಸಾಕಷ್ಟು ದೊರೆಯುವಿದಾಗ ಕೆರಳುತ್ತಾನೆ.

೦೦೦೦

ಐಶ್ವರ್ಯ ಮದದ ಕುರಿತು ವಿದುರನು ಹೇಳುತ್ತಾನೆ— ' ಐಶ್ವರ್ಯವಮದ ಪಾಪಿಷ್ಠಾ ಮದಾಪಾನ ಮದಾಧಿಕಃ | ಐಶ್ವರ್ಯ ಮದ ಮತ್ತೋ ಹಿ ನಾಪತಿತ್ಯಾ ವಿಭದ್ಯತೇ || ' [ಅಂದರೆ- ಮಾದಕ ಪದಾರ್ಥ ಸೇವನೆಯಿಂದ ಉಂಟಾದ ಮತ್ತು (ಅಮಲು) ಕೂಡಾ ಮದವೇ, ಆದರೆ, ಅದು ಬೇಗನೇ ಪರಿಹಾರವಾಗುತ್ತದೆ ; ಅದಕ್ಕಿಂತಲೂ ಕೆಟ್ಟದಾದ ಮತ್ತು (ಅಮಲು) ಯಾವುದೆಂದರೆ, ಐಶ್ವರ್ಯ ಮದ : ಈ ಮದವು, ಆ ಮನುಷ್ಯನನ್ನು ನಾಶವಾಡದೇ ಇಳಿಯುವುದೇ ಇಲ್ಲ.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ದಿಗ್ವಿಜಯ 8 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಭರಿತ 2 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಎಂ ಆರ್ ರಾಧ, ಎಸ್ ಎಸ್ ರಾಜೇಂದ್ರನ್

ಸಾವಿತ್ರಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ

ರಾಜಧಾನಿಯಲ್ಲಿ ಪ್ರಪ್ರಥಮ ಪ್ರದರ್ಶನ [ದಿನವಹಿ 3 ಆಟಗಳು]

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು



ಶಾಂತಿಗಾಗಿ ಅಣುಶಕ್ತಿ ಕಾರ್ಯಕ್ರಮಕ್ಕೆ ಸಂಬಂಧಿಸಿದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao, at the Sadvavadi Press Chamarajapuram, Mysore 4.